ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು.—ಮಾನ್ಯ ರೋಷನ್ ಬೇಗ್ ಅವರು ಹಾಜರಿಲ್ಲ. ಮಾನ್ಯ ವೀರಪ್ಪ ಮೊಯ್ಲಿಯವರೇ ತಾವು ಗಮನ ಸೆಳೆಯಿರಿ.

ಬ್ರಹ್ಮಾವರ, ಲಿಂಗದಹಳ್ಳಿ, ಭೂವನಹಳ್ಳಿ, ಬೀರಾದ್ ಮತ್ತು ಅಲ್ಮೇಲ್‌ಗಳಲ್ಲಿರುವ ಕೃಷಿ ಪ್ರೌಢಶಾಲೆಗಳನ್ನು ಮುಂಚ್ಚುವ ಸರ್ಕಾರದ ನಿರ್ಣಯದ ಬಗ್ಗೆ

ಶ್ರೀ ಎಂ. ವೀರಪ್ಪ ಮೊಯಿಲಿ —ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರ, ಲಿಂಗದಹಳ್ಳಿ, ಭೂವನಹಳ್ಳಿ, ಬೀರದ್ ಮತ್ತು ಅಲಮೇಲ್ ಕೃಷಿ ಪ್ರೌಢಶಾಲೆಗಳನ್ನು ಮುಂಚ್ಚುವ ಸರ್ಕಾರದ ನಿರ್ಣಯವನ್ನು ಹಿಂತೆಗೆದುಕೊಳ್ಳುವ ವಿಚಾರದ ಬಗ್ಗೆ ಕೃಷಿ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿಗಳು).—

ರಾಜ್ಯದಲ್ಲಿ ೨೧ ಕೃಷಿ ಪಾಠಶಾಲೆಗಳು ಇರುತ್ತವೆ. ೬ನೇ ಯೋಜನೆಯಲ್ಲಿ (೧೯೮೦-೮೫) ೧೩ ಶಾಲೆಗಳು ಯೋಜನೇತರ ನಿಧಿಯಲ್ಲಿ ಮತ್ತು ೮ ಶಾಲೆಗಳನ್ನು ಯೋಜನೆಯ ನಿಧಿಯಲ್ಲಿ ನಿರ್ವಹಿಸಲಾಗುತ್ತಿತ್ತು. ಕೃಷಿ ಇಲಾಖೆಯು ಉಳಿದ ೮ ಶಾಲೆಗಳನ್ನು ೬ನೇ ಯೋಜನೆಯ ಕೊನೆಯ ಅವಧಿಯಲ್ಲಿ (೧-೪-೧೯೮೪) ಯೋಜನೇತರ ನಿಧಿಗೆ ವರ್ಗಾಯಿಸಲು ಉದ್ದೇಶಿಸಿತ್ತು. ತಮ್ಮ ಪ್ರಸ್ತಾವನೆಯು ಒಪ್ಪಿಗೆ ಪಡೆಯಬಹುದೆಂಬ ಊಹೆಯೊಡನೆ ಕೃಷಿ ಇಲಾಖೆಯು ೬ನೇ ಯೋಜನೆಯಡಿಯಲ್ಲಿ ಈ ಕೃಷಿ ಪಾಠಶಾಲೆಗಳಿಗೆ ಯೋಜನಾ ನಿಧಿಯಲ್ಲಿ ಹಣವನ್ನು ಒದಗಿಸಲಿಲ್ಲ. ಯೋಜನೆಯ ನಿಧಿಯಿಂದ ಯೋಜನೇತರ ನಿಧಿಗೆ ಯೋಜನೆಗಳನ್ನು ವರ್ಗಾಯಿಸಲು ಇರುವ ನಿಯಮಗಳನ್ನು ಪರಿಶೀಲಿಸಿದಾಗ ಕೇವಲ ಮೂರು ಶಾಲೆಗಳಿಗೆ ಮಾತ್ರ ಯೋಜನೇತರ ನಿಧಿಗೆ ವರ್ಗಾಯಿಸಲು ಅರ್ಹತೆ ಇತ್ತು. ಹೀಗಾಗಿ ಬ್ರಹ್ಮಾವರ, ಲಿಂಗದಹಳ್ಳಿ, ಭೂವನಹಳ್ಳಿ, ಬೀರಾದ್ ಮತ್ತು ಅಲಮೇಲಿನ ಈ ಐದು ಶಾಲೆಗಳು ಯೋಜನೇತರ ನಿಧಿಗೆ ವರ್ಗಾಯಿಸಲು ಬೇಕಾಗುವ ಅರ್ಹತೆಗಳು ಇಲ್ಲದಿರುವುದು ಕಂಡು ಬಂದಿತು. ಆದರೆ ಇದು ಆಗಸ್ಟ್ ೧೯೮೪ರಲ್ಲಿ ಕಂಡು ಬಂತು ಆ ವೇಳೆಗೆ ೧೯೮೪-೮೫ರ ವಾರ್ಷಿಕ ಯೋಜನೆಯ ಬಗ್ಗೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗಿತ್ತು. ಇದು ೬ನೇ ಯೋಜನೆಯ ಮೊದಲನೇ ವರ್ಷವಾಗಿರುತ್ತದೆ. ಇದಾದ ಮೇಲೆ ಈ ಐದು ಶಾಲೆಗಳಿಗೆ ಈ ಸಾಲಿನಲ್ಲಿ ಹಣವನ್ನು ವರ್ಗಾವಣೆ ಮಾಡಿಕೊಂಡು ಹಣವನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಈ ಪರಿಶೀಲನೆಯು ಅಂತಿಮ ಘಟ್ಟದಲ್ಲಿದ್ದು ಶೀಘ್ರದಲ್ಲಿಯೇ ಹಣವನ್ನು ಒದಗಿಸಲಾಗುವುದು. ವಾರ್ಷಿಕ ಯೋಜನೆಯನ್ನು ನಿರ್ಧರಿಸುವ ವೇಳೆಯಲ್ಲಿ ಈ ಐದು ಶಾಲೆಗಳಿಗೆ ಯಾವ ರೀತಿಯಾಗಿ ಹಣವನ್ನು ಒದಗಿಸಬೇಕೆಂಬ ವಿಷಯ ದೃಢೀಕರಿಸಲಿಲ್ಲವಾಗಿದ್ದುದರಿಂದ ೧೯೮೬-೮೭ರ ಆಯವ್ಯಯದಲ್ಲಿ ಸಹ ಹಣವನ್ನು ಒದಗಿಸಲಾಗಲಿಲ್ಲ.

ಸರ್ಕಾರವು ಈ ಶಾಲೆಗಳನ್ನು ತೆರೆಯಲು ಒಪ್ಪಿರುವುದರಿಂದ, ಈ ಶಾಲೆಗಳನ್ನು ಈಗ ಮುಂಚ್ಚುವ ಯಾವ ಪ್ರಸ್ತಾವನೆಯು ಇರುವುದಿಲ್ಲ, ಈ ಸಾಲಿನಲ್ಲಿ ಈ ಐದು ಶಾಲೆಗಳಿಗೆ ಸರ್ಕಾರವು ವರ್ಗಾವಣೆಯಿಂದ ಹಣವನ್ನು ಒದಗಿಸುವುದು ಅವಶ್ಯವಾಗಿದೆ. ಕೃಷಿ ನಿರ್ದೇಶಕರು ಈ ಶಾಲೆಗಳು ೧-೪-೧೯೮೬ರಿಂದ ಮುಚ್ಚಲ್ಪಡುತ್ತದೆ ಎಂದು ಭಾವಿಸಿ, ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಜಂಟಿ ಕೃಷಿ ನಿರ್ದೇಶಕರುಗಳಿಗೆ ಕೊಟ್ಟಿರುವ ಸೂಚನೆಗಳು ಸರಿಯಲ್ಲ. ಕೃಷಿ ನಿರ್ದೇಶಕರು ೧೯೮೬-೮೭ರ ಆಯವ್ಯಯದಲ್ಲಿ ಹಣ ಒದಗಿಸದೇ ಇರುವುದರಿಂದ ಈ ಶಾಲೆಗಳು ಮುಚ್ಚಲ್ಪಡುತ್ತವೆ ಎಂದು ಊಹಿಸಿರುವುದು ಸರಿಯಲ್ಲ. ಏಕೆಂದರೆ ಸರ್ಕಾರವು ಈ ಶಾಲೆಗಳನ್ನು ಮುಂಜೂರಾತಿ ಮಾಡಿರುವ ಆಜ್ಞೆಯನ್ನು ರದ್ದುಗೊಳಿಸಿಲ್ಲ. ಕೃಷಿ ನಿರ್ದೇಶಕರಿಗೆ ಈ ಶಾಲೆಗಳನ್ನು ಮುಂಚ್ಚಬಾರದೆಂದು ಹಾಗೂ ಅವರು ನೀಡಿರುವ ಆದೇಶಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಸೂಚನೆಯನ್ನು ನೀಡಲಾಗುವುದು.